44

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡ ರವರು, ರಾಜ್ಯದಲ್ಲಿ ಬ್ರಿಟಿಷರ ಕಾಲದಲ್ಲಿ ನಿರ್ಮಾಣವಾಗಿರುವ ಅನೇಕ ಡ್ಯಾಂಗಳು ತುಂಬಾ ಹಳೆಯದಾಗಿದ್ದು, ಪದೇ ಪದೇ ಡ್ಯಾಂ ಹಾಗೂ ಅವುಗಳ ಗೇಟ್ ಗಳಲ್ಲಿ ನೀರಿನ ಸೋರಿಕೆಯಿಂದಾಗಿ ರಾಜ್ಯದ ಜನರು ಹಾಗೂ ಡ್ಯಾಂಗಳ ಕೆಳಭಾಗಗಳಲ್ಲಿ ವಾಸಿಸುತ್ತಿರುವ ಗ್ರಾಮದ ಜನರಿಗೆ ಯಾವಾಗಲೂ ಅಭದ್ರತೆ ಕಾಡುತ್ತಿರುವುದರಿಂದ ಅವುಗಳ ಭದ್ರತೆ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು 330ನೇ ನಿಯಮದಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಉಪ ಮುಖ್ಯಮಂತ್ರಿಗಳ ಉತ್ತರ.**

******

1. ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಕಾಯ್ದೆ-2021 ದಿನಾಂಕ 30.12.2021 ರಿಂದ ಜಾರಿಗೆ ಬಂದಿರುತ್ತದೆ. ಸದರಿ ಕಾಯ್ದೆಯ ಪ್ರಕಾರ ರಾಜ್ಯದ ವಿವಿಧ ಇಲಾಖೆಗಳಡಿಯ 231 ನಿರ್ದಿಷ್ಟಪಡಿಸಿದ ಅಣೆಕಟ್ಟುಗಳು ಇರುತ್ತವೆ(**ಅನುಬಂಧ-1** ರಲ್ಲಿ ನೀಡಲಾಗಿದೆ).

2. ಈ 231 ಅಣೆಕಟ್ಟುಗಳ ಪೈಕಿ ರಾಜ್ಯದಲ್ಲಿ 45 ಅಣೆಕಟ್ಟುಗಳು ಬ್ರಿಟಿಷರ ಕಾಲದಲ್ಲಿ ನಿರ್ಮಾಣವಾಗಿದ್ದು ಈಗಲೂ ಅಸ್ತಿತ್ವದಲ್ಲಿರುತ್ತದೆ(45 ಅಣೆಕಟ್ಟುಗಳ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ).

3. ಪ್ರಸ್ತುತ ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಕಾಯ್ದೆ-2021 ಯಲ್ಲಿ ಸೂಚಿಲಾಗಿರುವ ನಿಬಂಧನೆಗಳು ಹಾಗೂ ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಪ್ರಾಧಿಕಾರದಿಂದ ಕಾಲಕಾಲಕ್ಕೆ ಸ್ವೀಕೃತವಾಗುವ ಸೂಚನೆಗಳಿಗನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಎಲ್ಲಾ ಅಣೆಕಟ್ಟು ವಾರಸುದಾರರಿಗೆ ರಾಜ್ಯದ ಅಣೆಕಟ್ಟು ಸುರಕ್ಷತಾ ಸಂಸ್ಥೆಯಿಂದ ಸೂಚನೆಗಳನ್ನು ಕಳುಹಿಸಲಾಗುತ್ತಿದೆ.

4. ಸದರಿ 231 ಭಾರಿ ಅಣೆಕಟ್ಟುಗಳ ತಪಾಸಣೆ ನಿರ್ವಹಣೆ ಮತ್ತು ಸುರಕ್ಷತೆ ಖಚಿತಪಡಿಸಿಕೊಳ್ಳಲು ಕೇಂದ್ರ ಜಲ ಆಯೋಗದ 2018 ರ ನಿಯಮಾವಳಿಗಳಂತೆ ಪ್ರತಿ ವರ್ಷವು ಪೂರ್ವ ಮುಂಗಾರು ಹಾಗೂ ಉತ್ತರ ಮುಂಗಾರು ಪರಿವೀಕ್ಷಣೆಗಳನ್ನು ಕೈಗೊಂಡು, ಅಣೆಕಟ್ಟುಗಳನ್ನು ಸುರಕ್ಷಿತವಾಗಿಡಲು ಸಂಬಂಧಿಸಿದ ಅಣೆಕಟ್ಟು ವಾರಸುದಾರರು/ ಯೋಜನಾಧಿಕಾರಿಗಳು ಕ್ರಮವಹಿಸುತ್ತಿರುತ್ತಾರೆ.

5. ಇದಲ್ಲದೆ, ಈ 231 ಭಾರಿ ಅಣೆಕಟ್ಟುಗಳ ಸುರಕ್ಷತೆಯನ್ನು ನಿಯತಕಾಲಿಕವಾಗಿ ರಾಜ್ಯ ಅಣೆಕಟ್ಟು ಸುರಕ್ಷತಾ ಪರಿಶೀಲನಾ ಸಮಿತಿ/ತಂಡಗಳಿಂದ(Dam Safety Review Panel(DSRP)/Dam Safety Review Team(DSRT)) ಪರಿವೀಕ್ಷಣೆ ನಡೆಸಿ ಶಿಫಾರಸ್ಸುಗಳನ್ನು ನೀಡಲಾಗುತ್ತಿದ್ದು, ಅದರನ್ವಯ ಪ್ರಮುಖ ಅಣೆಕಟ್ಟುಗಳ ಪುನಶ್ಚೇತನ ಕಾಮಗಾರಿಗಳನ್ನು ವಿಶ್ವ ಬ್ಯಾಂಕ್ ನೆರವಿನ ಅಣೆಕಟ್ಟು ಪುನಶ್ಚೇತನ ಮತ್ತು ಅಭಿವೃದ್ಧಿ ಯೋಜನೆಯಡಿ(Dam Rehabilitation and Improvement Project(DRIP)) ಹಂತ ಹಂತವಾಗಿ ಕೈಗೊಳ್ಳಲಾಗುತ್ತಿದೆ ಹಾಗೂ ಅಣೆಕಟ್ಟುಗಳ ಸುರಕ್ಷತಾ ದೃಷ್ಟಿಯಿಂದ ಅಗತ್ಯವಿರುವ ದುರಸ್ತಿ ಕಾಮಗಾರಿಗಳನ್ನು ಸಂಬಂಧಪಟ್ಟ ನಿಗಮ/ಇಲಾಖೆಗಳಿಂದಲೂ ಸಹ ಅನುಷ್ಠಾನಗೊಳಿಸಲಾಗುತ್ತಿದೆ.

6. ಅಣೆಕಟ್ಟು ಸುರಕ್ಷತಾ ಕಾಯ್ದೆ-2021 ರನುಸಾರ ಅಣೆಕಟ್ಟುಗಳ ಸುರಕ್ಷತೆಗೆ/ ಭದ್ರತೆಗೆ ಸಂಬಂಧಿಸಿದಂತೆ ಈ ಕೆಳಕಂಡ ವರದಿ/ ತಾಂತ್ರಿಕ ಅಧ್ಯಯನ/ ದಾಖಲಾತಿಗಳನ್ನು

ತಯಾರಿಸಬೇಕಾಗಿರುತ್ತದೆ -

(ಅ) ತುರ್ತು ಕ್ರಿಯಾ ಯೋಜನೆ(Emergency Action Plan).

(ಆ) Early Warning System (EWS)

7. ಕೇಂದ್ರ ಜಲ ಆಯೋಗದ 2018 ರ ನಿಯಮಾವಳಿಗಳಂತೆ ಜಲ ಸಂಪನ್ಮೂಲ ಇಲಾಖೆಯ 24 ಅಣೆಕಟ್ಟುಗಳ ತುರ್ತು ಕ್ರಿಯಾ ಯೋಜನೆ(Emergency Action Plan(EAP)) ತಯಾರಿಸಲಾಗಿದ್ದು, ಸದರಿ ಅಣೆಕಟ್ಟುಗಳ ನೀರಿನ ಗರಿಷ್ಠ ಮಟ್ಟ ಮತ್ತು ಅಣೆಕಟ್ಟುಗಳಿಂದ ಬಿಡಬಹುದಾದ ಗರಿಷ್ಠ ನೀರಿನ ಪರಿಮಾಣ, ಹರಿವಿನ ಸಮಯ, ವೇಗವನ್ನು ಪರಿಗಣಿಸಿ ನದಿ ಪಾತ್ರದಲ್ಲಿ ಅದರಿಂದ ಉಂಟಾಗಬಹುದಾದ ಹಾನಿಯ ಪ್ರಮಾಣಗಳನ್ನು ಲೆಕ್ಕಿಸಿ ಮತ್ತು ಊಹಿಸಿ ತಯಾರಿಸಿರುವ ದಾಖಲಾತಿಗಳನ್ನು ಸಂಬಂಧಿತ ಜಿಲ್ಲಾಡಳಿತ ಇಲಾಖೆ, ರಾಜಸ್ವ ಇಲಾಖೆ ಸೇರಿದಂತೆ ಮತ್ತಿತರ ಇಲಾಖೆಗಳಿಗೆ ಈಗಾಗಲೇ ನೀಡಲಾಗಿರುತ್ತದೆ. ಈ ದಾಖಲಾತಿಯ ಕುರಿತು ಸಾರ್ವಜನಿಕರು ಹಾಗೂ ಮೇಲೆ ತಿಳಿಸಿರುವ ಎಲ್ಲಾ ಇಲಾಖೆಗಳ/Stake Holders ಗಳ ಸಭೆಗಳನ್ನು ಸಹ ನಡೆಸಲಾಗಿರುತ್ತದೆ(24 ಅಣೆಕಟ್ಟುಗಳ ವಿವರಗಳನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ). ಇನ್ನುಳಿದ ಅಣೆಕಟ್ಟುಗಳಿಗೆ Emergency Action Plan(EAP)ಗಳನ್ನು ಕೇಂದ್ರ ಜಲ ಆಯೋಗದ 2018 ರ ನಿಯಮಾವಳಿಗಳಂತೆ ನಿಗದಿತ ಕಾಲಾವಧಿಯೊಳಗೆ ತಯಾರಿಸಲು ಕಟ್ಟುನಿಟ್ಟಾದ ನಿರ್ದೇಶನವನ್ನು ಎಲ್ಲಾ ಅಣೆಕಟ್ಟುಗಳ ವಾರಸುದಾರರಿಗೆ ನೀಡಲಾಗಿದೆ.

8. ಪ್ರಸ್ತುತ ಚಾಲ್ತಿಯಲ್ಲಿರುವ ಪ್ರಕ್ರಿಯೆ ಪ್ರಕಾರ ಪ್ರತಿ ಜಲಾಶಯದ ನೀರಿನ ಮಟ್ಟವನ್ನು ಅದರಲ್ಲೂ ವಿಶೇಷವಾಗಿ ಮಳೆಗಾಲದ ಪ್ರಾರಂಭದ ಅವಧಿಯಿಂದ ಗಮನಿಸಿ ನೀರಿನ ಮಟ್ಟವನ್ನು ದಾಖಲು ಮಾಡಿಕೊಂಡು ಜಲಾಶಯದ ಸುರಕ್ಷತೆ ದೃಷ್ಟಿಯಿಂದ ನೀರಿನ ಹೊರ ಹರಿವನ್ನು ನಿಯಂತ್ರಿಸಲಾಗುತ್ತಿದೆ.

9. Early Warning System (EWS) ರಡಿ ಜಲಾಶಯದಿಂದ ನದಿಪಾತ್ರಕ್ಕೆ ಬಿಡುವ ನೀರಿನ ಹೊರ ಹರಿವಿನ ಪರಿಮಾಣ ಕುರಿತು, ಸಂಬಂಧಿತ ಜಿಲ್ಲಾಧಿಕಾರಿಗಳು ಮತ್ತು ತಹಶಿಲ್ದಾರ್ ರವರ ಕಛೇರಿಗಳಿಗೆ ಮತ್ತು ಜಿಲ್ಲಾಡಳಿತದ ವಿವಿಧ ಸಂಸ್ಥೆಗಳಿಗೆ, ಮಾಹಿತಿಯನ್ನು e-mail ಮೂಲಕ ಮತ್ತು ದೂರವಾಣಿ ಮೂಲಕ 24 ರಿಂದ 48 ಗಂಟೆಗಳ ಮುಂಚಿತವಾಗಿ ಒದಗಿಸಲಾಗುತ್ತಿದೆ.

10. ಅಣೆಕಟ್ಟು ಸುರಕ್ಷತೆಯ ಮಾನದಂಡಗಳನ್ನು ಕಾಪಾಡಿಕೊಳ್ಳುವ ಮತ್ತು ಅಣೆಕಟ್ಟುಗಳ ವೈಫಲ್ಯಕ್ಕೆ ಸಂಬಂಧಿತ ವಿಪತ್ತುಗಳನ್ನು ತಡೆಗಟ್ಟುವ ಉದ್ದೇಶಕ್ಕಾಗಿ, ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಪ್ರಾಧಿಕಾರದಿಂದ ಹೊರಡಿಸಿದ ಮಾರ್ಗಸೂಚಿಗಳು, ಮಾನದಂಡಗಳು ಮತ್ತು ಇತರೆ ನಿರ್ದೇಶನಗಳ ಪ್ರಕಾರ ಮತ್ತು ರಾಜ್ಯ ಅಣೆಕಟ್ಟು ಸುರಕ್ಷತಾ ಸಂಸ್ಥೆಯು ನಿರ್ವಹಿಸುವ ಕಾರ್ಯಗಳನ್ನು ಪರಿಶೀಲಿಸಲು ರಾಜ್ಯ ಅಣೆಕಟ್ಟು ಸುರಕ್ಷತಾ ಸಮಿತಿ(State Committee on Dam Safety) ಯನ್ನು ರಚಿಸಲಾಗಿದೆ.

11. ಈ ಸಮಿತಿಯು ಅಣೆಕಟ್ಟು ಸುರಕ್ಷತಾ ಕಾಯ್ದೆ-2021 ರಲ್ಲಿನ ಸೂಚನೆಯಂತೆ ವರ್ಷದಲ್ಲಿ ಎರಡು ಬಾರಿ ಸಭೆ ಸೇರಿ ತಜ್ಞರು ನೀಡಿದ ಸಲಹೆ/ಅಭಿಪ್ರಾಯಗಳನ್ವಯ ಕ್ರಮಗಳನ್ನು ಕೈಗೊಳ್ಳಲು ಅಣೆಕಟ್ಟು ವಾರಸುದಾರರಿಗೆ ಸೂಚನೆ/ಸಲಹೆಗಳನ್ನು ನೀಡುತ್ತದೆ ಹಾಗೂ ರಾಜ್ಯದ ಅಣೆಕಟ್ಟುಗಳ ಸುರಕ್ಷತೆಗಾಗಿ ವಿವಿಧ ಪ್ರಮುಖ ನಿರ್ಧಾರಗಳನ್ನು ಕೈಗೊಂಡಿರುತ್ತದೆ.

***ಸಂ:ಇ-ಜಸಂಇ 47 ಡಿಎಸ್ ಪಿ 2024***

**(ಡಿ.ಕೆ. ಶಿವಕುಮಾರ್)**

ಮಾನ್ಯ ಉಪಮುಖ್ಯ ಮಂತ್ರಿಗಳು

## ರಾಜ್ಯದ ವಿವಿಧ ಇಲಾಖೆಗಳಡಿ ಬರುವ ನಿರ್ದಿಷ್ಟ ಪಡಿಸಿದ ಅಣೆಕಟ್ಟುಗಳು

| ಕ್ರ.ಸಂ. | ಇಲಾಖೆಗಳು | ಸಂಖ್ಯೆ |
|---|---|---|
| 1. | ಜಲ ಸಂಪನ್ಮೂಲ ಇಲಾಖೆ(WRD) | 73 |
| 2. | ಕರ್ನಾಟಕ ವಿದ್ಯುತ್ ನಿಗಮನಿಯಮಿತ(KPCL) | 15 |
| 3. | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (BWS & SB) | 2 |
| 4. | ಸಣ್ಣ ನೀರಾವರಿ ಇಲಾಖೆ(MID) | 134 |
| 5. | ಕುದುರೆ ಮುಖ ಕಬ್ಬಿಣ ಮತ್ತುಅದಿರು ಕಂಪನಿ ನಿಯಮಿತ (KIOCL) | 1 |
| 6. | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ(KUWS &DB) | 2 |
| 7. | ನಗರಾಭಿವೃದ್ಧಿ ಇಲಾಖೆ(UDD) | 2 |
| 8. | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ(KIADB) | 1 |
| 9. | ಅರಣ್ಯ ಇಲಾಖೆ (Forest Dept) | 1 |
| | **ಒಟ್ಟು** | **231** |

ಅನುಬಂಧ-2

| Sl. No. | Zone | NRLD Sl No.-2019 | PIC | Name of Dam |
|---|---|---|---|---|
| **I. Operated & Maintained by Karnataka Water Resources Department** | | | | |
| **a) Cauvery Neeravari Nigam** | | | | |
| 1 | **Chief Engineer, Irrigation(South), Mysore** | 18 | KA06HH0020 | K.R.Sagara Dam |
| 2 | | 29 | KA06MH0031 | Kanva Dam |
| 3 | **Chief Engineer, Hemavathy Project , Canal Zone, Tumkur** | 218 | KA06MH0223 | Mallaghatta Tank |
| 4 | | 223 | KA06LH0228 | Turuvekere |
| 5 | | 25 | KA06MH0027 | Marconahalli |
| 6 | | 219 | KA06LH0224 | Mayasandra Tank |
| 7 | | 221 | KA06LH0226 | Sarigehalli Tank |
| 8 | | 11 | KA06LH0013 | Nittur Tank |
| 9 | | 8 | KA06LH0010 | Kadaba Tank |
| 10 | | 9 | KA06LH0011 | Kunigal Doddakere |
| 11 | **Chief Engineer, Hemavathy Project Dam Zone, Gorur** | 1 | KA06MH0001 | Thonnur Tank |
| **b) Karnataka Neeravari Nigam** | | | | |
| 12 | **Chief Engineer, Upper Tunga Project Shimoga** | 21 | KA06MH0023 | Anjanapura Tank |
| 13 | | 224 | KA06LH0229 | Bheemasamudra Dam |
| 14 | | 214 | KA06LH0217 | Sheelavantanakoppa D.kere |
| 15 | | 14 | KA06HH0016 | Madagamasur Tank |
| **c) Visveswaraya Jala Nigam** | | | | |
| 16 | **Chief Engineer, Upper Bhadra Project, Chitradurga** | 13 | KA06HH0015 | Vani Vilasa Sagar Dam |
| **II. Operated & Maintained by Minor Irrigation Department** | | | | |
| **a) Minor Irrigation(South) Bangalore** | | | | |
| 17 | **Chief Engineer, MI, (S) B'lore Division** | 28 | KA06MH0030 | Byramangala Tank |
| 18 | | 19 | KA06LH0021 | Doddalahalli Tank |
| 19 | | 22 | KA06MH0024 | Maralawadi Tank |
| 20 | | 27 | KA06MH0029 | Nelligudda Tank |

| Sl. No. | Zone | NRLD Sl No.-2019 | PIC | Name of Dam |
|---|---|---|---|---|
| 21 | Chief Engineer, MI, (S) B'lore Division | 215 | KA06LH0218 | Bharamasagara Doddakere |
| 22 | | 24 | KA06LH0026 | Ballalasamudra Tank |
| 23 | | 16 | KA06MH0018 | Mavinahole Tank |
| 24 | | 12 | KA06LH0014 | Ranikere Tank |
| 25 | | 17 | KA06LH0019 | Sowlanga Tank |
| 26 | | 209 | KA06LH0212 | Bukkambudi Doddakere |
| 27 | | 108 | KA06MH0110 | Madaga Tank(New) |
| 28 | | 2 | KA06LH0002 | Madaga Tank (old) |
| 29 | | 212 | KA06LH0215 | Vishnusamudra Tank |
| 30 | | 213 | KA06LH0216 | Y.Urumundinakere |
| 31 | | 26 | KA06MH0028 | Markandeya Tank |
| 32 | | 216 | KA06LH0219 | Bukkapatna Tank |
| 33 | | 4 | KA06MH0004 | Boranakanive Tank |
| 34 | | 7 | KA06MH0008 | Deepambudikere |
| 35 | | 217 | KA06LH0222 | Lakshmisagara Tank |
| 36 | | 15 | KA06LH0017 | Mavathur Tank |
| 37 | | 10 | KA06LH0012 | Nidasale Tank |
| 38 | | 220 | KA06LH0225 | Ramalingapura Tank |
| 39 | | 222 | KA06LH0227 | Singadahalli Dalawai kere |
| 40 | | 23 | KA06LH0025 | Thumbadi Amanikere |
| **b) Minor Irrigation (North), Vijayapura** | | | | |
| 41 | Chief Engineer, Minor Irrigation (N), Bijapur | 3 | KA06MH0003 | Kottur Tank |
| 42 | | 211 | KA06LH0214 | Medleri Tank |
| **III. Operated & Maintained by Other Boards and Corporations** | | | | |
| 43 | Engineer-in-Chief, BWSSB, Bangalore. | 6 | KA06LH0006 | Hesaraghatta |
| 44 | | 20 | KA06HH0022 | Thippagondana Halli |
| 45 | Chief Engineer-1, Karnataka Industrial Area Development Board | 5 | KA06LH0005 | Maidala Amanikere Tank |

ಅನುಬಂಧ-3

| SL.NO | NAME OF ZONE | NAME OF DAM | LATEST STAGE OF ACTION TAKEN REGARDING PREPARATION OF EAP |
|---|---|---|---|
| **Karnataka Neeravari Nigam Limited (KNNL)** | | | |
| 1 | Chief Engineer, I(N),Belgaum | Hidkal | Prepared Apr 2019 |
| 2 | Chief Engineer, Malaprabha Project, Dharwad | Malaprabha | Prepared Aug 2018 |
| 3 | Chief Engineer, UTP, Shimoga | Bhadra | Prepared April 2019 |
| | | Devarabelekere | Prepared Nov 2019 |
| 4 | Chief Engineer, ICZ, Munirabad | H.B.HalliPickup | Prepared Sept 2022 |
| | | Kanakanala | Prepared ( not uploaded in website) |
| | | Maskinala | Prepared Sept 2022 |
| 5 | Chief Engineer, IPZ Gulbarga | Amarja | Prepared- 2020 |
| | | Bennithora | Prepared- 2020 |
| | | Bhima lift | Prepared ( not uploaded in website) |
| | | Chandrampalli | Prepared Sept 2020 |
| | | Hattikuni | Prepared Sept 2020 |
| | | Karanja | Prepared- 2020 |
| | | Lower Mullamari | Prepared- 2020 |
| | | Upper Mullamari | Prepared- 2019 |
| **Krishna Bhagya Jal Nigam Limited (KBJNL)** | | | |
| 6 | Chief Engineer, Almatti | Almatti | Prepared Jan 2020 |
| 7 | Chief Engineer, O & M Zone, Narayanapura | Narayanpur Dam | Prepared Dec 2022 |
| **Cauvery Neeravari Nigam Limited (CNNL)** | | | |
| 8 | Chief Engineer, I(S), Mysore | Chickahole | Prepared May 2022 |
| | | Harangi | Prepared May 2022 |
| | | Kabini | Prepared June 2022 |
| | | K.R.sagara | Prepared June2022 |
| 9 | Chief Engineer, HPZ Gorur | Hemavathy | Prepared June 2019 |
| | | Votehole | Prepared May 2019 |
| 10 | Chief Engineer, HCZ Tumkur | Mallaghatta | Prepared |
| | **TOTAL NO OF DAMS** | | **24** |